| 6 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು ನಗರ. | |
|---|---|
| ಸಿ.ಸಿ. ನಂ. | **10213-2016** |
| ಸಾಕ್ಷಿಯ ಹೆಸರು | ಶ್ರುತಿ ಜೆ |
| ತಂದೆ ಹೆಸರು | ಬಂಗಾರಪ್ಪ ಜೆ |
| ವಯಸ್ಸು | 27 ವರ್ಷ |
| ಉದ್ಯೋಗ | ಖಾಸಗಿ ಕೆಲಸ |
| ವಾಸ ಸ್ಥಳ | ಬೆಂಗಳೂರು |

ಸಾಕ್ಷಿಯನ್ನು ದಿನಾಂಕ 21-11-2023 ರಂದು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.
ಮುಖ್ಯ ವಿಚಾರಣೆ: ಮಾನ್ಯ ಹಿರಿಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ:

ಚಾಸಾ-1 ಮತ್ತು 2 ನನ್ನ ತಂದೆ ತಾಯಿ ಇರುತ್ತಾರೆ. ಆರೋಪಿಗಳು ನನಗೆ ಗೊತ್ತು. ಚಾಸಾ-3 ನನಗೆ ಗೊತ್ತಿರುವುದಿಲ್ಲ, ಚಾಸಾ-4 ನನಗೆ ಗೊತ್ತು. 2015 ರಲ್ಲಿ ನಾನು ಬಿಟಿಎಂ 2 ನೇ ಹಂತದಲ್ಲಿ ನನ್ನ ತಂದೆ ತಾಯಿ ಜೊತೆ ವಾಸವಿದ್ದೆ ಆ ಸಮಯದಲ್ಲಿ ನಾನು ಬಿಎಂಎಸ್ ಕಾಲೇಜಿನಲ್ಲಿ 2 ನೇ ವರ್ಷದ ಇಂಜನಿಯರ್ ಓದುತ್ತಿದ್ದೆ. 2008 ನೇ ಇಸವಿಯಲ್ಲಿ ನಮ್ಮ ತಂದೆ ತಾಯಿ ಸಾರ್ವಬೌಮ ನಗರ ದಲ್ಲಿರುವ ನಮ್ಮ ಸೈಟಿನ ಸಂಖ್ಯೆ 117 ಕ್ಕೆ ತೊಂದರೆಯಾಗಿದೆ ಎಂದು ನನಗೆ ಹೇಳಿದರು. ಅಲ್ಲಿ ಎರಡು ಶೆಡ್ ಗಳಿದ್ದವು. ಸದರಿ ಸೈಟು 40*60 ಅಳತೆ ಇತ್ತು. ಸದರಿ ಸೈಟಿಗೆ ಕಾಂಪೌಂಡ್ ವಾಲ್ ಹಾಕಲಾಗಿತ್ತು. ಮುರುಳಿ ಮತ್ತು ರಜನಿಯವರು 2008 ರಲ್ಲಿ ಅತಿಕ್ರಮವಾಗಿ ನಿವೇಶನಕ್ಕೆ ಬಂದು ಕಾಂಪೌಂಡ್ ವಾಲ್ ನ್ನು ಹೊಡೆದುಬಿಟ್ಟರು, ರಜನಿ ಮುರುಳಿಯವರಿಗೆ ಗೊತ್ತಿರುವವರನ್ನು ತಂದು ಶೆಡ್ ನಲ್ಲಿ ಕೂರಿಸಿದರು ಎಂಬ ವಿಷಯವನ್ನು ನನ್ನ ತಂದೆ ತಾಯಿ ನನಗೆ ತಿಳಿಸಿರುತ್ತಾರೆ. ಆನಂತರ ಅದರ ಬಗ್ಗೆ ನನ್ನ ತಂದೆ ಕೋರ್ಟ ನಲ್ಲಿ ಕೇಸನ್ನು ಹಾಕಿರುತ್ತಾರೆ. ಆ ಸದರಿ ಕೇಸಿನಲ್ಲಿ ನಮ್ಮ ಪರವಾಗಿ ತೀರ್ಪಾಗಿದೆ ಎಂದು ನನಗೆ ತಿಳಿಸಿರುತ್ತಾರೆ. ಅಪೀಲ್ ಡಿಸ್ ಮಿಸ್ ಆಗಿರುವ ಬಗ್ಗೆ ನನ್ನ ತಾಯಿ ತಿಳಿಸಿದ್ದರು. 04.12.2014 ರಂದು ಬೆಳಗ್ಗೆ 11.30 ಸಮಯಕ್ಕೆ ನನ್ನ ತಂದೆ ತಾಯಿ ಹಾಗೂ ಅವರ ಸ್ನೇಹಿತರ ಜೊತೆ ನಾನೂ ಸಹ ಸೈಟನ ಒಳಗೆ ಹೋದೆವು. ನಾವು ಒಳಗೆ ಹೋದಾಗ ರಜನಿ, ಮುರುಳಿ, ಮತ್ತು ಅವರ ಸ್ನೇಹಿತರಾದ ಆನಂದ್, ಮೂರ್ತಿ, ಜಯಣ್ಣ, ರವರು ಸೈಟನ ಒಳಗಡೆ ಬಂದರು, ನನ್ನ ತಂದೆ ತಾಯಿ ಜೊತೆ ಜಗಳವಾಡಿದರು ನನ್ನ ತಂದೆಗೆ

ಕೆಟ್ಟ ಕೆಟ್ಟ ಶಬ್ದಗಳಿಂದ ಬೈಯ್ದುರು. ಮುರುಳಿಯವರು ನನ್ನ ತಂದೆಗೆ ಪುನಃ ಈ ಸೈಟಿನ ಹತ್ತಿರ ಬಂದರೆ ಸಾಯಿಸಿಬಿಡುತ್ತೇನೆಂದು ಹೇಳಿರುತ್ತಾರೆ. ಜಗಳವಾದ ನಂತರ ನಾವು ಬಂದಿರುತ್ತೇವೆ, ನನ್ನ ತಂದೆ ಪೋಲಿಸರಿಗೆ ದೂರನ್ನು ಕೊಟ್ಟಿರುತ್ತಾರೆ. ಪೋಲಿಸರು ನನ್ನ ಹತ್ತಿರ ವಿಚಾರಣೆ ಮಾಡಿರುತ್ತಾರೆ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದ ಃ**

(ಈ ಸಮಯದಲ್ಲಿ ಪಾಟೀ ಸವಾಲಿಗೆ ಕಾಲವಕಾಶ ನೀಡಿ, ಮುಂದೂಡಲಾಯಿತು.)

ಓ. ಹೇ. ಕೇ. ಸ. ಇ. ಎ. ಒ.

6 ನೇ ಅ ಮು ಮ ದಂ ನ್ಯಾ